

# ಸಮಾಜಮುಖಿ ಕರ್ಮಯೋಗಿ

## ಚರಿತ್ ಬಾಲಪ್ಪ ಪೂಜಾರಿ

### ಸ್ಟಾರ್‌ಸುವರ್ಣದ 'ಮುದ್ದು ಲಕ್ಷ್ಮಿ'ಯ ಡಾ. ದ್ರುವಂತ್

★ *ನಿಮ್ಮ ಹಿನ್ನೆಲೆಯನ್ನು ಹೇಳಿ?*

ಮೂಲ ಮಂಗಳೂರು, ಬೆಳೆದಿದ್ದು ಸೋಮವಾರಪೇಟೆ ಹತ್ತಿರ ಕೂಡ್ಲಿಪೇಟೆ ಎಂಬಲ್ಲಿ ತೋಟ ಇರುವ ಕಾರಣಕ್ಕೆ ಅಲ್ಲಿ 15 ವರ್ಷ ಇದ್ದೆ. ಶಾಲಾ ದಿನಗಳಲ್ಲಿಯೇ ವೇದಿಕೆಗೆ ಹತ್ತುವ, ಪ್ರಶಸ್ತಿಗಳನ್ನು ಪಡೆಯುವ ನಾಟಕ, ರೂಪಕ ಕಲಿಯುವ ಆಶೆಗಳಿದ್ದವು. ಆರ್ಥಿಕವಾಗಿ ಸ್ಥಿತಿವಂತರಲ್ಲದ ಕುಟುಂಬ. ಅದಕ್ಕೆಲ್ಲ ಪ್ರೋತ್ಸಾಹ ಸಿಗಲಿಲ್ಲ. ನಟನೆ ಬಗ್ಗೆ ಆಶೆ ವ್ಯಕ್ತಪಡಿಸಿದ್ದರೂ ಓದು ಹಾಳಾಗುತ್ತದೆ ಎನ್ನುವ ಉತ್ತರ ಬರುತ್ತಿತ್ತು. ಆಗ ನನಗೂ ಸರಿ ಅನ್ನಿಸಿತು. ವೈದ್ಯನಾಗಬೇಕು ಎಂದು ಕನಸು ಕಂಡೆ. ಪಿಯುನಲ್ಲಿ ಅದಕ್ಕೆ ಬೇಕಾಗುವಷ್ಟು ಓದಲಾಗಲಿಲ್ಲ. ಈಗ ತೆರೆಯಲ್ಲಿ ವೈದ್ಯನಾಗಿದ್ದೇನೆ.

★ *ನಿಶ್ಚಿತ ಆದಾಯ ಬಿಟ್ಟು ಅನಿಶ್ಚಿತ ಬದುಕು ಅರಸಿ ಬಂದ ಕಾರಣ?*

ವೈದ್ಯನಾಗುವುದಿಲ್ಲ ಎನ್ನುವುದು ಗೊತ್ತಾದ ತಕ್ಷಣ ಬಿಬಿಎಂ ಮಾಡಿ, ಎಂಬಿಎ ಮಾಡಿದೆ. ಆಮೇಲೆ ಎಚ್‌ಎಸ್‌ಬಿಸಿ ಬ್ಯಾಂಕ್‌ಗೆ ಕ್ಯಾಂಪಸ್‌ನಲ್ಲೆ ಕೆಲಸ ಸಿಕ್ಕಿತು. ನಂತರ 'ಡೆಲ್' ಕಂಪನಿಗೆ ಎಚ್‌ಆರ್‌ಎಂ ಆಗಿ ಬಂದೆ. ಮತ್ತೆರಡು ಕಂಪನಿಗಳನ್ನು ಬದಲಾಯಿಸಿದೆ. ಅಷ್ಟರಲ್ಲಿ ನನ್ನ ಅದೃಷ್ಟದ ಬಾಗಿಲು ತೆರೆಯಿತು. ಅಂತರರಾಷ್ಟ್ರೀಯ ವಿಮಾನದಲ್ಲಿ ಗಗನಸಖನಾದೆ. ನಿತ್ಯವೂ ಬೇರೆ ಬೇರೆ ದೇಶ ಸುತ್ತುವ ಅವಕಾಶ. ತಾರಾ ಬದುಕಿನ ವೈಭವ ಅನುಭವಿಸಿದೆ. ಮಾಡೆಲ್ ಆಗಬೇಕು, ನಟನಾಗಬೇಕು ಎನ್ನುವ ಮನದ ಹಂಬಲ ಮತ್ತೆ ಚಿಗುರಿತು. ಸಿಕ್ಕಂತಹ ಅವಕಾಶಗಳನ್ನು ಬಿಟ್ಟಿದ್ದೆ. ಹೀಗಿದ್ದಾಗ ನನ್ನ ಬಯಕೆಯಂತೆ ಬದುಕಬೇಕೆಂದು ಕೆಲಸವನ್ನು ಬಿಟ್ಟೆ. ಅದರ ಪರಿಣಾಮ ಮನೆಯಿಂದ ಹೊರಗೆ ಬರಬೇಕಾಯಿತು. ಆಡಿಷನ್ ಆರಂಭಿಸಿದೆ ಝೀಕನ್ನಡದ 'ಲವ್‌ಲವಿಕೆ'ಯಲ್ಲಿ ಅವಕಾಶ ಸಿಕ್ಕಿತು. ಆಗ ಜೀವನ ಕಷ್ಟ ಆಯ್ತು. ನನಗೆ ಸಿಕ್ಕ ಲಕ್ಕಿ ಪಾತ್ರ ದೊಡ್ಡ ಹೆಸರನ್ನು ತಂದುಕೊಟ್ಟಿತು. ಪೂರ್ಣಾವಧಿ ನಟನಾಗಬೇಕು ಎಂದು ನಿರ್ಧರಿಸಿದೆ. ಇದು ನನ್ನ ನಾಲ್ಕನೇ ಧಾರಾವಾಹಿ. ನಮ್ಮ ಪೋಷಕರಿಗೆ ನನ್ನ ಬಗ್ಗೆ ಭರವಸೆ ಮೂಡಿದೆ. ಈಗ ಅವರೂ ಪ್ರೋತ್ಸಾಹಿಸುತ್ತಾರೆ. ಬದುಕಿನ ಏಳು ಬೀಳುಗಳು ಏನೇ ಇರಲಿ ಕೊನೆ ಉಸಿರು ಇರುವ ತನಕ ಬಣ್ಣವನ್ನು ಹಚ್ಚುತ್ತೇನೆ. ನಟನೆಗೆ ನಾನು ಮೀಸಲಾಗಿರುತ್ತೇನೆ.

★ *ಡಾ.ದ್ರುವಂತ್ ಎಂತಹ ಹುಡುಗ?*

ಮೌಲ್ಯವನ್ನು ಪ್ರತಿಪಾದಿಸುವ ಒಳ್ಳೆಯ ಹುಡುಗನ ಪಾತ್ರ. ಹೃದಯವಂತ ಹೃದಯ ವೈದ್ಯ ಎನ್ನುವುದನ್ನು ಸಾಬೀತುಪಡಿಸುವ ಪಾತ್ರ. ಆದರ್ಶ ಗುಣದ ದ್ರುವಂತ್ ಶ್ರೀಮಂತ ಕುಟುಂಬದವನು. ಆಡಂಬರಕ್ಕಿಂತ ಸಹಜತೆಗೆ, ಮಾನವೀಯತೆಗೆ ಮಿಡಿಯುವ, ಮನುಷ್ಯತ್ವವನ್ನು ಗೌರವಿಸುವ ವ್ಯಕ್ತಿ. ಶೋಷಿತರ ಮೇಲೆ ತುಂಬಾ ಕಾಳಜಿ. ಮಲತಾಯಿಯ ಅವಕೃಪೆಗೆ ಪಾತ್ರವಾಗಿದ್ದ ಒಬ್ಬ ಹುಡುಗಿ ಪರಿಚಯವಾಗುತ್ತಾಳೆ. ಬಣ್ಣವೂ ಇಲ್ಲದ ಸ್ವರೂಪವೂ ಇಲ್ಲದ ಬಡ ಹುಡುಗಿಯ ಮೇಲೆ ಮಮಕಾರ ಹುಟ್ಟಿ ಸಹಾಯ ಮಾಡುತ್ತಾನೆ. ಅವಳ ಮೇಲಿದ್ದ ಕರುಣೆ ಕ್ರಮೇಣ ಪ್ರೀತಿಸುವಂತೆ ಪ್ರೇರೇಪಿಸುತ್ತದೆ. ಒಟ್ಟಾರೆ ನನಗೆ ಇಷ್ಟ ಆಗುವ ಗುಣ ಸ್ವಭಾವದ ಪಾತ್ರ. ಇದುವರೆಗೆ ನಾನು ನಾಲ್ಕು ಪಾತ್ರಗಳನ್ನು ಮಾಡಿದ್ದೇನೆ. ನಾಲ್ಕೂ ಪಾತ್ರಗಳು ಭಿನ್ನವಾಗಿವೆ. ಒಬ್ಬ ನಟನಾಗಿ ಭಿನ್ನ ಪಾತ್ರವನ್ನೇ ಬಯಸುತ್ತೇನೆ.

★ *ನಿಮ್ಮ ನಟನಾ ಅನುಭವದ ಬಗ್ಗೆ ಹೇಳುವುದಾದರೆ...*

ಪ್ರತಿಭೆಯೊಂದೆ ಮಾನದಂಡವಾಗಬೇಕು ಎನ್ನುವುದು ನನ್ನ ಪ್ರಾಮಾಣಿಕ ಅನಿಸಿಕೆ. ನಾಯಕನೂ ಸೇರಿ ಒಬ್ಬ ಹಾಸ್ಯನಟನಾಗಲಿ, ಖಳನಾಯಕನಾಗಲಿ ಸುಲಭಕ್ಕೆ ಪಾತ್ರಗಳಿಗೆ ನ್ಯಾಯ ಒದಗಿಸಲು ಸಾಧ್ಯವಿಲ್ಲ. ಅವನಲ್ಲಿ ಪ್ರತಿಭೆ ಇದ್ದರೆ ಮಾತ್ರ ಸಾಧ್ಯ. ಎಲ್ಲ ಪ್ರತಿಭಾವಂತ ನಟರಿಗೆ ಮಾನ್ಯತೆ ಸಿಗಬೇಕು. ಪ್ರೋತ್ಸಾಹ ಸಿಗಬೇಕು ಎನ್ನುವುದು ನನ್ನ ಆಶಯ. ಸದ್ಯದ ಪರಿಸ್ಥಿತಿಯಲ್ಲಿ ಯಾರಾದರೂ ನಟಿಸಬಹುದು ಎನ್ನುವ ಮನೋಭಾವ ಸಿನಿಮಾ ಜಗತ್ತಿನಲ್ಲಿ ಮನೆ ಮಾಡಿದೆ. ಅದು ಹೋಗಬೇಕು. ಪ್ರತಿಭೆಗಳನ್ನು ಪ್ರೋತ್ಸಾಹಿಸುವಂತೆ ಆಗಬೇಕು.

★ *ಪಾತ್ರ ನಿರ್ವಹಣೆಗೆ ನಿಮ್ಮ ಸಿದ್ಧತೆ ಹೇಗಿರುತ್ತದೆ?*

ನಾನು ಪಾತ್ರಕ್ಕೆ ಒಪ್ಪಿದ ಕೂಡಲೇ ಸ್ಕ್ರಿಪ್ಟ್ ಚೆನ್ನಾಗಿ ಓದುತ್ತೇನೆ. ಪಾತ್ರಕ್ಕೆ ನ್ಯಾಯ ಕೊಡಬೇಕು ಎಂದರೆ ಪಾತ್ರದೊಳಗೆ ನಾನು ಬೆರೆಯಬೇಕು. ಆಮಟ್ಟಿಗೆ ನನ್ನ ಭಾವ– ದೇಹವನ್ನು ಅಣಿಗೊಳಿಸುತ್ತೇನೆ. ನನ್ನ ತಯಾರಿಗೆ ಮೂಲ ಕಾರಣ ಕಥೆಗಾರರು. ಕಥೆಯ ನಿರೂಪಣೆಯಲ್ಲಿ ಬರುವ ಪ್ರತಿ ಘಟನೆ, ಸನ್ನಿವೇಶಗಳ ಬಗ್ಗೆ ಧ್ಯಾನಿಸುತ್ತೇನೆ. ಪಾತ್ರ– ಪಾತ್ರಗಳ ನಡುವಿನ ಸಂಘರ್ಷ, ಸ್ನೇಹದ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಯತ್ನಿಸುತ್ತೇನೆ. ಅದಾದ ಮೇಲೆ ಅಭಿನಯ ಸರಳ ಅನ್ನಿಸುತ್ತೆ.

★ *ನಿಮ್ಮ ಸಿನಿಮಾ ಯೋಜನೆ ಏನಾಗಿದೆ?*

ಕ್ರಾಂತಿಕಾರಕ ಕಥೆಯ ಸಿನಿಮಾ 'ಕರ್ಮಯೋಗಿ' ಸಿದ್ಧವಾಗಿದೆ. ಅದರಲ್ಲಿ ನಾನು ನಟಿಸುವ ಭರವಸೆಯನ್ನೂ ನೀಡಿದ್ದೇನೆ. ಸದ್ಯ ಹಣದ ಕೊರತೆ ಇರುವುದರಿಂದ ಸಿನಿಮಾ ಆರಂಭವಾಗಿಲ್ಲ. ವೈಯಕ್ತಿಕವಾಗಿ ಆ ಸಿನಿಮಾವೇ ನನ್ನ ಕೊನೆಯ ಸಿನಿಮಾ ಆದರೂ ಯಾವ ಬೇಸರವೂ ಇಲ್ಲ. ಆದರೆ ಆ ಸಿನಿಮಾವನ್ನು ಮಾಡಲೇಬೇಕು ಎನ್ನುವ ಹುಚ್ಚು ಇದೆ. ಸಮಾಜ ಮುಖಿ ಕಥೆಯನ್ನು ಒಳಗೊಂಡಿರುವ ಸಿನಿಮಾ. ಯುವಜನಾಂಗ ಹೇಗೆ ತನ್ನ ಶಕ್ತಿಯನ್ನು ರಚನಾತ್ಮಕವಾಗಿ ವಿನಿಯೋಗಿಸಬೇಕು ಎನ್ನುವ ಸಾರಾಂಶವನ್ನು ಹೊಂದಿರುವ ಕಥೆ. ನಿಜಕ್ಕೂ ಸಮಾಜದ ಒಳಿತಿಗೆ ಮಿಡಿಯುವ ಕಥೆ. ಭಾಷಾ ಪ್ರೇಮದ ಇತಿಮಿತಿಗಳು ಹೇಗಿರಬೇಕು ಎನ್ನುವ ಅಂಶವೂ ಸೇರಿದೆ. ರೌಡಿಸಂ, ಪ್ರೇಮದ ಕಥೆಗಳ ಭರಾಟೆಯಲ್ಲಿ ನಿಜಕ್ಕೂ ಭಿನ್ನ ಅನ್ನಿಸುವ ಸಿನಿಮಾ ಅದು.

■ ರಾಘವೇಂದ್ರ